ಹುಡುಗ ಮಲೆನಾಡಿಗೆ ಹೊರಟಿದ್ದ. ಬಟಾಬಯಲಿನಲ್ಲಿ ಮೈ ಸುಟ್ಟುಕೊಂಡು ಮರದ ನೆರಳಿಗಾಗಿ ಮೈಲುದ್ದ ನಡೆಯಬೇಕಾದ ಬಿಸಿಲಾರಣ್ಯಗಳಿಂದ ಕ್ರಮೇಣ ಕಪ್ಪಾಗಿಬಿಡುತ್ತೇನೆಂದು ಎಲ್ಲಿಯೋ ಅಳುಕಿದ್ದ. ಅದಕ್ಕೆ ಭಾವ, 'ಮುಂದೇನ್ಮಾಡ್ತಿ?' ಅಂದಾಗ ಮೌನವಾಗಿ ಕೂತು, 'ಕಾರವಾರಕ್ಕೆ ಬಂದು ಬಿಡು, ಪಿಯುಸೀಗೆ ಸೇರಿಸ್ತೀನಿ' ಎಂಬ ಇನ್ನೊಂದು ಸಲಹೆ ಭಾವನಿಂದಲೇ ಬರುವಂತೆ ಮಾಡಿದ್ದ. "ಹ್ಞಂ... ಕಣೋ... ಅವರು ಹೇಳೋದು ಸರಿ. ನನಗೂ ಹೊಸ ಜಾಗ, ಹೊಸ ಜನ. ತರಕಾರಿ ತರೋಕೆ, ಮಿಲ್ ಮಾಡಿಸೋಕೆ ಒಬ್ಬರು ಬೇಕೇಬೇಕು. ಅಲ್ಲೇ ಓದೀವಂತೆ. ಕಾರವಾರಕ್ಕೆ ಬಾ. ಮನೆ ಎದುರಿಗೇ ಕಾಲೇಜು ಐತಂತೆ...' ಅಕ್ಕ ಕೂಡ ಆಮಿಷ ಹುಟ್ಟಿಸಿ ಕರೆದಳು.

ಅಕ್ಕನ ಮದುವೆಯಾಗಿ ಎರಡೇ ತಿಂಗಳಾಗಿತ್ತು. ಮನೆಯ ಮುಂದಿನ ಚಪ್ಪರ ಬಿಚ್ಚಿರಲಿಲ್ಲ. ಕಂಬಗಳಿಗೆ ಬಿಗಿದಿದ್ದ ಸೋಗೆಯ ಹಸಿರುಗರಿಗಳನ್ನು ಆಡುಮರಿ ಅಡರುಗಾಲು ಹಾಕಿ ಕರುಂ ಕರುಂ ತಿಂದಿದ್ದವು. ರಜೆ ಮುಗಿಸಿ ಹೊರಟಾಗ ಭಾವ ಅಕ್ಕನನ್ನೂ ಕರೆದುಕೊಂಡು ಹೋಗಲು ತೀರ್ಮಾನಿಸಿದ್ದರು. ಗಂಡನೊಡನೆ ಹೊಸ ಊರು ಸೇರುವ ತವಕ ಎದೆ ತುಂಬಾ ಇತ್ತು. ತಮ್ಮನನ್ನೂ ಕರೆದಳು. ಬಯಲುಸೀಮೆಯ ಹುಡುಗ ಓದಲಿಕ್ಕೆಂದು ಮಲೆನಾಡಿಗೆ ಹೊರಟ. ಅಪ್ಪನ ಹಳೆ ಟ್ರಂಕಿಗೆ ಮೂರಂಗಿ, ಎರಡು ಚಡ್ಡಿ, ಕೈ ಎಣ್ಣೆ ಬಾಟ್ಲು, ಜಾಮಿಟ್ರಿ ಬಾಕ್ಸ್, ಮೊಂಡಾದ ಪೆನ್ಸಿಲ್ಲು, ಅರ್ಧ ಬ್ಲೇಡು, ಪಾಕೆಟ್ ಕ್ಯಾಲೆಂಡರ್ ಎಲ್ಲವನ್ನೂ ಜೋಡಿಸಿಕೊಂಡ. 'ಪಿಯೂಸೀಗೆ ಕಾರವಾರದಲ್ಲಿ ಸೇರ್ತೀನಿ ಸಾ. ನಮ್ಮ ಅಕ್ಕ-ಭಾವ ಬರೇಳವ್ರೆ' ಎಂದು ಹೆಡ್ಮಾಸ್ಟರು ಸತ್ಯನಾರಾಯಣ ಅವರ ಹತ್ತಿರ ಎಸ್ಸೆಲ್ಸಿ ಮಾರ್ಕ್ಸ್‌ಕಾರ್ಡ್ ತಗೊಳ್ಳುವಾಗ ಎದೆ ಸೆಟೆಸಿ ಹೇಳಿದ್ದ. ಹೆಡ್ಮಾಸ್ಟರು ನಕ್ಕು, 'ಮುಂಡೇದೇ, ಕಾರವಾರ ಅಂದ್ರೆ ಫಾರಿನ್ನು ಅಂತ ತಿಳ್ಕೊಂಡಿದೀಯ? ಅದೂ ಕರ್ನಾಟಕದಲ್ಲೇ ಇರೋದು' ಅಂತ ಹೇಳಿ ಪರ್‍ರನೆ ಟಿ.ಸಿ. ಹರಿದು ಮಾರ್ಕ್ಸ್‌ಕಾರ್ಡನ್ನೂ, ಕ್ಯಾರೆಕ್ಟರ್ ಸರ್ಟಿಫಿಕೇಟನ್ನೂ ಅದರೊಳಗೆ ಸುತ್ತಿ 'ಬಯಲುಸೀಮೆ ಹುಡುಗ ಮಲೆನಾಡಿಗೆ ಹೋಗ್ತಿದ್ದಿ, ಯಾರಾದರೂ ತುಂಡು ಲಂಗದ ಹುಡುಗಿ ಬುಟ್ಟಿಗೆ ಹಾಕಿಕೊಂಡುಬಿಟ್ಟಾಳು... ಹುಶಾರು!' ಅಂತ ಎಚ್ಚರಿಸಿ ಕಳುಹಿಸಿಕೊಟ್ಟರು. ಹಲ್ಲುಗಿಂಜಿಕೊಂಡು ನಗುತ್ತಾ ಹೈಸ್ಕೂಲು ಮೆಟ್ಟಿಲು ಇಳಿದಿದ್ದ.

ದೇವರಾಜ ಸನ್ ಆಫ್ ಸುಬ್ಬಣ್ಣ ವಿತ್ ಡೇಟ್ ಆಫ್ ಬರ್ಥ್ 15-08-1967 ಅಂತ ಮಾರ್ಕ್ಸ್‌ಕಾರ್ಡ್‌ನ ಮೇಲಿತ್ತು. ಒಂದು ಮೂಲೆಯಲ್ಲಿ 045375 ಅಂತ ರಿಜಿಸ್ಟರು ನಂಬರು. ಇಂಗ್ಲಿಷು – 36, ಕನ್ನಡ – 40, ಹಿಂದಿ – 13 ಹೀಗೆ ನಂಬರುಗಳು ನಲವತ್ತು ಮೀರಿರಲಿಲ್ಲ. ಹೆಡ್ಮಾಸ್ಟರ್ ಸತ್ಯನಾರಾಯಣ ಅವರು ದುಂಡಗೆ ಸಹಿ ಹಾಕಿದ್ದರು ಕೆಳಗೆ.

★★★

ದೇವರಾಜ ಕೆಂಪಾದ ಹುಡುಗ, ಮೀಸೆ ಹುಟುವ ಮುನ್ಸೂಚನೆ ಇತ್ತು. ನಿರ್ಮಲ ಕಣ್ಣುಗಳಿದ್ದವು. ನಕ್ಕಾಗ ಬಾಯನ್ನು ಕಿವಿಯವರೆಗೆ ವಿಸ್ತರಿಸುತ್ತಿದ್ದ. ಯಾರಾದರೂ ಮೈ ಚಿವುಟಿದರೆ ಒಂದು ಕ್ಷಣ ಮುಖದಲ್ಲಿ ರಕ್ತ ತೊಟ್ಟಿಕ್ಕುವಂತೆ ಭಾಸವಾಗುವಷ್ಟು ಕೆಂಪಾಗಿಬಿಡುತ್ತಿದ್ದ. 'ಒಳ್ಳೇ ಹುಡುಗಿ ಥರಾ ಇದ್ದಿ' ಅಂತ ಚುಡಾಯಿಸಿದಾಗ ಸಿಟ್ಟಿಗೆ ಮತ್ತೂ ಕೆಂಪಾಗಿಬಿಡುತ್ತಿದ್ದ! ಹುಡುಗರು 'ದೇವ್ರಾಜಾ' ಅಂತಿದ್ದರು. ಬೇಗನೇ ಕೇಳಿಸಿಕೊಂಡರೆ 'ದೆವ್ವ್ರಾ ಜಾ' ಅಂತಲೂ ಕೇಳಿಸುತ್ತಿತ್ತು. ಬದುಕ ಅರಳುವಿಕೆಗೆ ಕುತೂಹಲದ ರೆಪ್ಪೆಗಳನ್ನು ಬಡಿದು ತನ್ಮಯತೆಗೆ ಪಕ್ಕಾಗಿ ಆಸಕ್ತಿಯಿಂದ ಹಲವು ಸಂಗತಿಗಳನ್ನು ದಿಟ್ಟಿಸುತ್ತಿದ್ದ. ದೇವರಾಜ